ಬೆಳಗಾವಿ ನಗರದ ರಾಣಿ ಚೆನ್ನಮ್ಮ ನಗರ ಹಾಗೂ ಪಾಶ್ಚಾಪೂರ ಗ್ರಾಮದ ಪೋಲೀಸ್ ಠಾಣೆ ಪ್ರಾರಂಭ.

2312 (2971)

ಶ್ರೀ ಉಮೇಶ ವಿಶ್ವನಾಥ ಕತ್ತಿ(ಹುಕ್ಕೇರಿ): ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ, ಬೆಳಗಾವಿ ನಗರದ ರಾಣಿ ಚೆನ್ನಮ್ಮಾ ನಗರದ ಪೊಲೀಸ್ ಠಾಣೆ ಹಾಗೂ ಹುಕ್ಕೇರಿ ತಾಲ್ಲೂಕಿನ ಪಾಶ್ಚಾಪೂರ ಗ್ರಾಮದ ಪೋಲೀಸ್ ಠಾಣೆ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿ ಇದೆಯೇ?

ಆ) ಹಾಗಿದ್ದಲ್ಲಿ, ಈ ಪ್ರಸ್ತಾವನೆಗಳು ಯಾವ ಹಂತದಲ್ಲಿವೆ?

ಇ) ಸರ್ಕಾರ ಈ ವಿಷಯದ ಬಗ್ಗೆ ತೆಗೆದುಕೊಂಡ ಕ್ರಮಗಳೇನು?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು):

ಅ, ಆ ಮತ್ತು ಇ) ಪ್ರಸಕ್ತ ಆರ್ಥಿಕ ವರ್ಷದಲ್ಲಿ ೧೦ ಪೊಲೀಸ್ ಠಾಣೆಗಳನ್ನು ತೆರೆಯಲುದ್ದೇಶಿಸಲಾಗಿದೆ. ಪೊಲೀಸ್ ಠಾಣೆಗಳು ಅತ್ಯಗತ್ಯವಿರುವಂತಹ ಸ್ಥಳಗಳನ್ನು ಗುರುತಿಸಿ, ಅಂತಹ ಸ್ಥಳಗಳಲ್ಲಿ ಪೊಲೀಸು ಠಾಣೆಗಳನ್ನು ತೆರೆಯಲಾಗುವುದು.

ಕಳೆದ ಮೂರು ವರ್ಷಗಳಲ್ಲಿ ವಿದ್ಯುತ್ ಮಂಡಳಿಯ ಬೇಜವಾಬ್ದಾರಿಯಿಂದ ಉಂಟಾಗಿರುವ ಜೀವಹಾನಿ.

2315(3012)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 3 ವರ್ಷಗಳಲ್ಲಿ ವಿದ್ಯುತ್ ಮಂಡಳಿಯ ಬೇಜಾವಾಬ್ದಾರಿಯಿಂದ ಉಂಟಾಗಿರುವ ಜೀವಹಾನಿ ಎಷ್ಟು (ಮಾನವ - ಪ್ರಾಣಿ ಪ್ರತ್ಯೇಕ ವಿವರ ನೀಡಿ) ಜಿಲ್ಲಾವಾರು;

ಆ) ವಿದ್ಯುತ್ ತಗುಲಿ ಮೃತಪಟ್ಟ ಪ್ರಕರಣಗಳಲ್ಲಿ ಎಷ್ಟು ಮೊತ್ತದ ಪರಿಹಾರ ನೀಡಲಾಗುತ್ತಿದೆ, ಮನುಷ್ಯರ ಜೀವ ಹಾನಿಗೆ ಎಷ್ಟು, ಪ್ರಾಣಿಗಳ ಜೀವ ಹಾನಿಗೆ ಎಷ್ಟು?